# ಶಾಹಿದ್ ಡಿಮ್ಯಾಂಡ್




ಶಾಹಿದ್ ಕಪೂರ್ ಇತ್ತೀಚೆಗೆ ಸಾಕಷ್ಟು ಬುದ್ಧಿವಂತನಾಗುತ್ತಿದ್ದಾನೆ. ಹಾಗೆಂದು ಆತನೇ ಹೇಳಿಕೊಂಡಿದ್ದಾನೆ. 'ಜಬ್ ವಿ ಮೆಟ್ ಚಿತ್ರದ ಬಳಿಕ ಸಾಕಷ್ಟು ದೂರ ಪಯಣಿಸಿದ್ದೇನೆ. ನನ್ನಿಂದ ಸಾಕಷ್ಟು ತಪ್ಪುಗಳಾಗಿವೆ. ಅವೆಲ್ಲದರಿಂದ ಪಾಠ ಕಲಿತಿದ್ದೇನೆ. ಈಗ ನಾನು ಮೆಚೂರ್ಡ್ ನಟ, ಜವಾಬ್ದಾರಿಯೂ ಹೆಚ್ಚಿದೆ' ಎಂದಿದ್ದಾನೆ ಶಾಹಿದ್.

'ಕರೀನಾ ಕಪೂರ್ ಜತೆ ಮತ್ತೆ ನಟಿಸುತ್ತೀರಾ?' ಎಂದು ಪತ್ರಕರ್ತರು ಕೇಳಿದಾಗ ಶಾಹಿದ್ ನೀಡಿದ ಉತ್ತರ ಇನ್ನೂ ಉತ್ತೇಜಕವಾಗಿದೆ. 'ಅಂತಹ ಅವಕಾಶ ಸದ್ಯಕ್ಕೆ ಬಂದಿಲ್ಲ. ಆದರೆ ಅವಕಾಶ ಬಂದರೆ ಖಂಡಿತಾ ನಟಿಸಲು ಸಿದ್ಧ' ಎಂದಿದ್ದಾನೆ ಶಾಹಿದ್.

ಶಾಹಿದ್ ಏನೋ ರೆಡಿ ಇದ್ದಾನೆ. ಆದರೆ ಕರೀನಾ ಕಪೂರ್ ರೆಡಿ ಇರಬೇಕಲ್ಲ. ಒಂದು ಕಾಲದಲ್ಲಿ ಅತ್ಯಂತ ನಿಕಟ ಪ್ರೇಮಿಗಳಾಗಿದ್ದ ಈ ಇಬ್ಬರೂ ಬೇರೆಯಾದ ಬಳಿಕ ಒಮ್ಮೆಯೂ ಸಂಧಿಸಿಲ್ಲ. ಸಾರ್ವಜನಿಕವಾಗಿ ಒಟ್ಟಿಗೆ ಕಾಣಿಸಿಕೊಂಡಿಲ್ಲ. ಕರೀನಾಗೆ ಅವಳ ಬಾಯ್‌ಫ್ರೆಂಡ್ ಸೈಫ್ ಅಲಿ ಖಾನ್ ಸದಾ ಕಾಲ ಅಂಟಿಕೊಂಡೇ ಇರುವುದರಿಂದ, ಶಾಹಿದ್ ಆಸೆ ಸದ್ಯಕ್ಕೆ ನೆರವೇರುವಂತೆ ಕಾಣುತ್ತಿಲ್ಲ.

ಅದೇನೇ ಇದ್ದರೂ ಈಗ ಶಾಹಿದ್ ಕಾಲ. ಪಾಠಶಾಲಾ ಎಂಬ ಚಿತ್ರ ರಿಲೀಸ್ ಆಗಿ ಹಲವೆಡೆ ಒಳ್ಳೆಯ ಪ್ರತಿಕ್ರಿಯೆ ಸಿಕ್ಕಿದೆ. ಬದ್ಮಾಶ್ ಕಂಪೆನಿ ಶೀಘ್ರ ಬಿಡುಗಡೆ ಆಗಲಿದೆ. ಈ ಮಧ್ಯೆ ತಂದೆ ಪಂಕಜ್ ಕಪೂರ್ ನಿರ್ಮಿಸುತ್ತಿರುವ 'ಮೌಸಮ್' ಚಿತ್ರದಲ್ಲಿ ಶಾಹಿದ್ ಏರ್‌ಫೋರ್ಸ್ ಪೈಲಟ್ ಪಾತ್ರ ಮಾಡುತ್ತಿದ್ದಾನೆ. ಕರೀನಾ ಕೈಕೊಟ್ಟ ಬಳಿಕ ಸಾಕಷ್ಟು ಕಾಲ ಡಿಮ್ ಆಗಿದ್ದ ಶಾಹಿದ್ ಈಗ ಬಾಲಿವುಡ್‌ನ ಹಾಟ್ ಫೇವರೆಟ್!

# ಶ್ರೀದೇವಿ ಕನಸು

ಮಗಳನ್ನು ಬೆಳ್ಳಿತೆರೆಗೆ ತಂದು ಸಖತ್ ಮಿಂಚುವಂತೆ ಮಾಡಬೇಕೆಂಬ ಶ್ರೀದೇವಿ ಕನಸು ನನಸಾಗಿದೆ. 70-80ರ ದಶಕದಲ್ಲಿ ಬಾಲಿವುಡ್ ಸಹಿತ ತೆಲುಗು, ತಮಿಳು ಚಿತ್ರರಂಗವನ್ನು ಅಕ್ಷರಶಃ ಆಳಿದ ಶ್ರೀದೇವಿ, ಈಗ ಮಗಳ ಮೊದಲ ಸಿನಿಮಾ ಹಿಟ್ ಆಗಬೇಕೆಂದು ಹಲ್ಲು ಕಚ್ಚಿ ದುಡಿಯುತ್ತಿದ್ದಾಳೆ. ಮಗಳು ಜಾಹ್ನವಿ ನೋಡಲು ಇನ್ನೂ ಚಿಕ್ಕವಳಂತೇ ಕಾಣಿಸುತ್ತಿರುವುದರಿಂದ ಅಷ್ಟೇ ವಯಸ್ಸಿನ ಹೀರೋನನ್ನು ಕೂಡಾ ಹುಡುಕಿದ್ದಾಳೆ. ತೆಲುಗು ಸೂಪರ್‌ಸ್ಟಾರ್ ನಾಗಾರ್ಜುನನ ಎರಡನೇ ಮಗ ಅಖಿಲ್ ಜಾಹ್ನವಿಯ ಹೀರೊ. ಈ ತೆಲುಗು ಚಿತ್ರದ ಚಿತ್ರೀಕರಣ ಭರದಿಂದ ನಡೆದಿದೆ.

'ಅದೇಕೆ ಮಗಳನ್ನು ಹಿಂದಿ ಸಿನಿಮಾದಲ್ಲಿ ಇಂಟ್ರೊಡ್ಯೂಸ್ ಮಾಡಲಿಲ್ಲ?' ಎಂದು ಪ್ರಶ್ನಿಸಿದರೆ, ಶ್ರೀದೇವಿ, 'ಆಕೆ ಈಗಿನ್ನೂ ಚಿಕ್ಕವಳು. ತೆಲುಗಿನಲ್ಲಿ ಅನುಭವ ಸಿಗಲಿ. ಆಮೇಲೆ ಹಿಂದಿ ಇದ್ದೇ ಇದೆಯಲ್ಲ..' ಎಂದಿದ್ದಾಳೆ. ಒಳ್ಳೆಯ ಆಲೋಚನೆಯೇ. ಅಷ್ಟು ಮಾತ್ರವಲ್ಲ, ಜಾಹ್ನವಿಯನ್ನು ಕಲಾಕ್ಷೇತ್ರದ ಸುಲೋಚನಾ ಅವರ ಬಳಿ ಬಿಟ್ಟು ಮೂರು ತಿಂಗಳ ಕಾಲ ಅಭಿವ್ಯಕ್ತಿಯ ತರಬೇತಿಯನ್ನೂ ಶ್ರೀದೇವಿ ಕೊಡಿಸಿದ್ದಾಳೆ. ಸೂಪರ್ ಮಮ್ಮಿ ಎನ್ನಲಡ್ಡಿಯಿಲ್ಲ.





# ದೀಪಿಕಾ ಭೇಟಿ

ರಣಬೀರ್ ಕಪೂರನ ಜತೆಗಿನ ದೀಪಿಕಾ ಸ್ನೇಹ ಕಳಚಿಬಿದ್ದು ಬಹಳ ಸಮಯವಾಯಿತು. ರಣಬೀರನ ಸುತ್ತ ಕರೀನಾ ಸುತ್ತಾಡುತ್ತಿರುವುದೂ ಹಳೆಯ ಸುದ್ದಿ ಆಯಿತು. ಆದರೆ ಕಳೆದ ವಾರ ದೀಪಿಕಾ ರಣಬೀರನ ಮನೆಗೆ ಹೋಗಿ ಊಟ ಮಾಡಿ ಬಂದದ್ದು ಮಾತ್ರ ಇದೀಗ ಹೊಸ ಸುದ್ದಿ!

ಶಮ್ಮಿಕಪೂರ್ ಮನೆಗೆ ಸಂಜೆ ಹೊತ್ತಿಗೆ ಕೂಲಾಗಿ ಭೇಟಿ ನೀಡಿದ ಕರೀನಾ ಸುಮಾರು ಎರಡೂವರೆ ಗಂಟೆ ಕಾಲ ಅಲ್ಲೇ ಇದ್ದಳಂತೆ. ಮಾತ್ರವಲ್ಲ ಶಮ್ಮಿ ಕಪೂರ್ ಕುಟುಂಬದ ಜತೆ ರಾತ್ರಿ ಭೋಜನವನ್ನೂ ಮುಗಿಸಿದ್ದಾಳೆ. 'ಏನಪ್ಪಾ ಅಷ್ಟು ಹೊತ್ತು ಮಾತನಾಡಿದ್ದು?' ಎಂದು ವಿಚಾರಿಸಿದರೆ, ಶಮ್ಮಿ ಹೇಳಿದ್ದು– 'ನಾನು ದೀಪಿಕಾಳ ಫ್ಯಾನ್. ನನ್ನ ಸಿನಿಮಾ ಬಗ್ಗೆ ಮತ್ತು ಅವಳ ಸಿನಿಮಾ ಬಗ್ಗೆ ಸಖತ್ ಹರಟೆ ಕೊಚ್ಚಿದೆವು. ನನ್ನ ಹಳೇ ಕಥೆಗಳನ್ನೆಲ್ಲ ಕೇಳಿದಳು. ಅವಳ ನಟನೆಯ ಬಗ್ಗೆ ಕೆಲವು ಟಿಪ್ಸ್ ನೀಡಿದೆ...'

ದೀಪಿಕಾಗೆ ನೇರವಾಗಿ ಪ್ರಶ್ನೆ ಹಾಕಿದಾಗ, 'ಅವೆಲ್ಲ ಹೇಳಲಾಗುತ್ತದೆಯೆ? ಪರ್ಸನಲ್ ಭೇಟಿಯದು' ಎಂದಳಂತೆ. ಯಾವುದು ಸತ್ಯ..?

■ ಬಿಂದು